ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1322(1634)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಅಬಕಾರಿ ಸಚಿವರು

ವಿಷಯ : ಸನ್ನದುಗಳ ಬಗ್ಗೆ

(ಅ) ಸನ್ನದು ಎಂದರೇನು; ಅಬಕಾರಿ ಇಲಾಖೆಯಡಿ ಹಾಲಿ ಜಾರಿಯಲ್ಲಿರುವ ಸನ್ನದುಗಳು ಯಾವುವು; ಯಾವ ಯಾವ ಉದ್ಯಮಗಳಿಗಾಗಿ ಯಾವ ಯಾವ ಸನ್ನದುಗಳನ್ನು ನೀಡಲಾಗುತ್ತದೆ; (ಸನ್ನದುವಾರು ಮಾಹಿತಿ ನೀಡುವುದು)

(ಆ) ಸದರಿ ಸನ್ನದುಗಳನ್ನು ಪಡೆಯಲು ಹಾಲಿ ಇರುವ ಮಾರ್ಗಸೂಚಿಗಳೇನು; (ಸನ್ನದುವಾರು ವಿವರವಾದ ಮಾಹಿತಿ ನೀಡುವುದು)

(ಇ) ತುಮಕೂರು ರೆವಿನ್ಯೂ ಜಿಲ್ಲಾ ವ್ಯಾಪ್ತಿಯಲ್ಲಿ ಹಾಲಿ ಎಷ್ಟು ಪ್ರವಾಸೋದ್ಯಮ ಮತ್ತು ಹೋಟೆಲ್ ಸನ್ನದುಗಳು ಇವೆ; ಇವುಗಳಿಗೆ ಯಾವಾಗ ಲೈಸೆನ್ಸ್ ನೀಡಲಾಗಿದೆ; (ವಿವರವಾಗಿ ಸನ್ನದುದಾರರ ಹೆಸರು ವಿಳಾಸದೊಂದಿಗೆ ತಾಲ್ಲೂ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಹೊಸದಾಗಿ ಮದ್ಯ ಮಾರಾಟ ಪರವಾನಗಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಪರವಾನಗಿ ನೀಡಲಾಗುವುದು?